# ವಿದ್ಯಾರ್ಥಿಗಳ ಸ್ಫೂರ್ತಿಯ ನೆಲೆಯಾಗಿ ಭಗವದ್ಗೀತೆ

ನಮ್ಮ ತಾಯಿ: ಭಗವದ್ಗೀತೆಯು ನಮ್ಮ ತಾಯಿ ಇದ್ದ ಹಾಗೆ. ಮಹಾತ್ಮ ಗಾಂಧಿ ಇದನ್ನು 'ಮಾತೆ' ಎಂದು ಕರೆದರು. ತಾಯಿ ನಮ್ಮನ್ನು ರಕ್ಷಿಸುವಳು, ಪೋಷಿಸುವಳು ಮತ್ತು ನಮ್ಮ ದೇಹ–ಮನಸ್ಸುಗಳ ವಿಕಾಸಕ್ಕೆ ಕಾರಣಳಾಗಿರುವಳು. ಭಗವದ್ಗೀತೆಯೂ ಹಾಗೆಯೆ.

ನಮಗೆ ಏಕೆ ಕಷ್ಟ ಬರುತ್ತದೆ?: ನಮಗೆ ಏಕೆ ಕಷ್ಟ ಬರುತ್ತದೆ? ನಾವೇಕೆ ಆಗಾಗ ಗೊಂದಲದಲ್ಲಿ ಸಿಕ್ಕಿಹಾಕಿಕೊಳ್ಳುತ್ತೇವೆ? ಅರ್ಜುನ ಮಹಾವೀರ. ಜಗತ್ತಿನಲ್ಲಿಯೆ ಅಪ್ರತಿಮ ಬಿಲ್ಲುಗಾರ. ಆದರೂ ತಾನು ಯುದ್ಧಮಾಡಬೇಕಾಗಿರುವವರನ್ನು ನೋಡಿದೊಡನೆ ಅವನಿಗೆ ಮೈ ನಡುಗಿತು, ಹೃದಯ ತಲ್ಲಣಿಸಿತು. ಅವನ ಅವಸ್ಥೆಯನ್ನು ಕಂಡು ಶ್ರೀಕೃಷ್ಣ ಹೀಗೆ ಹೇಳಿದ: "ಅರ್ಜುನಾ! ನೀನು ಮಹಾವೀರ, ಹೇಡಿಗಳಿಗೆ ತಕ್ಕುದಾದ ಈ ಹೃದಯ ದೌರ್ಬಲ್ಯ ನಿನಗೆ ಹೇಗೆ ಬಂತು? ಇದನ್ನು ಬಿಟ್ಟು ಎದ್ದೇಳು." ನಮ್ಮ ದುರ್ಬಲತೆಗೆ, ಹೇಡಿತನಕ್ಕೆ ಕಾರಣ ಏನು? **ಶ್ರೀಕೃಷ್ಣನ ಪ್ರಕಾರ ಅದಕ್ಕೆ ಮೂಲ ಕಾರಣ ನಮ್ಮ ಬಗ್ಗೆ ನಮಗಿರುವ ತಪ್ಪು ಅಭಿಪ್ರಾಯ.** ಶ್ರೀಕೃಷ್ಣ ಹೇಳುತ್ತಾನೆ, ನಾವೆಲ್ಲರೂ ಆತ್ಮಸ್ವರೂಪರು ಎಂದು. ಹಾಗೆಂದರೇನು? ನಮ್ಮಲ್ಲಿ ಅನಂತ ಶಕ್ತಿ ಇದೆ, ನಾವು ಪರಿಶುದ್ಧರು, ನಮಗೆ ಯಾವ ಪಾಪವೂ ತಟ್ಟಲಾರದು.

**ಕೆಲಸ ಮಾಡುವ ವಿಧಾನ:** ಕೆಲಸ ಮಾಡುವಾಗ ಸುಖವೂ ಇರುತ್ತದೆ, ದುಃಖವೂ ಬರುತ್ತದೆ. ಒಮ್ಮೊಮ್ಮೆ ಜಯವುಂಟಾಗುತ್ತದೆ, ಮತ್ತೊಮ್ಮೆ ಸೋಲುಂಟಾಗುತ್ತದೆ. ಅದನ್ನೆಲ್ಲ ಲೆಕ್ಕಿಸದೆ, ಕೆಲಸ ಮಾಡುತ್ತ ಹೋಗಬೇಕು. ಕೆಲಸದ ಫಲ ಏನುಂಟಾಗುವದೋ ಎಂಬ ಚಿಂತೆ ಇದ್ದರೆ, ಕೆಲಸ ಚೆನ್ನಾಗಿ ನಡೆಯುವುದಿಲ್ಲ. ಅದರ ಬದಲಾಗಿ, ಕೈಯಲ್ಲಿರುವ ಕೆಲಸದ ಬಗ್ಗೆಯೆ ಸಂಪೂರ್ಣ ಗಮನ ಇರಬೇಕು. ಕೆಲಸವನ್ನು ನಿರ್ಲಿಪ್ತ ಭಾವನೆಯಿಂದ ಮಾಡಲು ಕಲಿಯಬೇಕು. ಆಗ ಅದರಲ್ಲಿ ಸೋಲಾದರೂ ದುಃಖವಾಗುವುದಿಲ್ಲ. ಕುಶಲತೆಯಿಂದ ಹೀಗೆ ಕರ್ಮ ಮಾಡುವುದನ್ನೆ ನಾವು **'ಯೋಗ'** ಎಂದು ಕರೆಯುತ್ತೇವೆ. ಆಗ ನಾವು ನಮ್ಮೆಲ್ಲ ಓದಿನಲ್ಲೂ, ಮಾಡುವ ಕಾರ್ಯದಲ್ಲಿಯೂ ದಕ್ಷತೆಯನ್ನು ಮತ್ತು ಉತ್ಕೃಷ್ಟತೆಯನ್ನು ಪಡೆಯುತ್ತೇವೆ. ಆಗ ಕೆಲಸ ಮಾಡುವುದು ಕಷ್ಟವೆನ್ನಿಸುವುದೇ ಇಲ್ಲ, ಆನಂದದಾಯಕವಾಗಿರುತ್ತದೆ.

**ಯಜ್ಞದೃಷ್ಟಿ :** ಯಜ್ಞದೃಷ್ಟಿ ಎಂದರೆ ವಿಶ್ವದ ನಿಯಮಕ್ಕೆ ಒಳಗಾಗಿ ಜೀವಿಸುವುದು. ಪರಸ್ಪರ ಸಹಕಾರವೇ ಈ ವಿಶ್ವದ ನಿಯಮ. ಈ ಜಗತ್ತಿನಲ್ಲಿ ಯಾರೂ ಸ್ವತಂತ್ರರಲ್ಲ. ಎಲ್ಲರೂ ಇತರರ ಮೇಲೆ ಅವಲಂಬಿತರು. ಆದ್ದರಿಂದ, ನಾವು ನಮಗಾಗಿ ಮಾತ್ರ ಬಾಳದೆ, ಇತರರ ಒಳಿತಿಗಾಗಿ ಕೂಡ ಶ್ರಮಿಸಬೇಕು. ನಾವು ಸಂಪಾದಿಸಿದ್ದನ್ನು ಇತರರಿಗೆ ಹಂಚಿ ಅನುಭವಿಸಬೇಕು. ಇಲ್ಲದಿದ್ದರೆ ನಾವು ಸ್ವಾರ್ಥಿಗಳೂ ಸಂಕುಚಿತ ಮನಸ್ಸಿನವರೂ ಆಗುತ್ತೇವೆ. **ಪರಸ್ಪರ ಸಹಕಾರ** ಮತ್ತು **ಸದ್ಭಾವನೆಗಳೇ** ಎಲ್ಲ ಯಜ್ಞಗಳ ಹಿಂದಿರುವ ತತ್ವವೆಂದು ಶ್ರೀಕೃಷ್ಣ ಹೇಳುವನು.

**ನಮ್ಮ ಶತ್ರುಗಳು:** ನಮ್ಮ ನಿಜವಾದ ಶತ್ರುಗಳು ಯಾರು ಗೊತ್ತೇ? ಅವರು ಹೊರಗಿಲ್ಲ, ನಮ್ಮೊಳಗೇ ಇದ್ದಾರೆ. ಅವುಗಳೆಂದರೆ **ಅತಿಯಾದ ಪ್ರೀತಿ (ರಾಗ)** ಮತ್ತು ಇತರರಲ್ಲಿ **ದ್ವೇಷ ಭಾವನೆ.** ಅವುಗಳು ನಮ್ಮನ್ನು ತಪ್ಪುದಾರಿಗೆ ಎಳೆಯುತ್ತವೆ. ಅವುಗಳು ನಮ್ಮ ಇಂದ್ರಿಯಗಳ ಮೂಲಕ ಕೆಲಸಮಾಡುತ್ತವೆ. ಆದ್ದರಿಂದ ನಮ್ಮ ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಬಹಳ ಮುಖ್ಯವಾದುದು. ಇಲ್ಲವಾದರೆ, ಅವು ನಮ್ಮ ಜೀವನವನ್ನೇ ಹಾಳು ಮಾಡುತ್ತವೆ.

**ಜ್ಞಾನಕ್ಕಿಂತ ಪವಿತ್ರವಾದುದು ಯಾವುದೂ ಇಲ್ಲ :** ಗುರುಗಳ ಸೇವೆ ಮಾಡಿ, ಅವರನ್ನು ಪ್ರಶ್ನಿಸಿ ಜ್ಞಾನವನ್ನು ಪಡೆದುಕೊಳ್ಳಬೇಕು. ನಿಜವಾದ ಜ್ಞಾನದಿಂದ ಎಲ್ಲ ಬಗೆಯ ತಪ್ಪು ತಿಳುವಳಿಕೆಗಳೂ ನಾಶವಾಗಿ, ನಮ್ಮ ಬಗ್ಗೆ ನಮಗೆ ಸರಿಯಾದ ಅರಿವು ಮೂಡುತ್ತದೆ. ಜ್ಞಾನವೆಂದರೆ ಬೆಂಕಿಯ ಹಾಗೆ. ಅದು ನಮ್ಮ ಮನಸ್ಸಿನಲ್ಲಿರುವ ಎಲ್ಲ ಬಗೆಯ ಕೆಟ್ಟ ಸಂಸ್ಕಾರಗಳನ್ನೂ ಭಸ್ಮ ಮಾಡಿ, ನಮ್ಮನ್ನು ಪರಿಶುದ್ಧರನ್ನಾಗಿ ಮಾಡುತ್ತದೆ. **ನ ಹಿ ಜ್ಞಾನೇನ ಸದೃಶಂ ಪವಿತ್ರಮ್ ಇಹ ವಿದ್ಯತೇ** – ಜ್ಞಾನಕ್ಕಿಂತ ಪವಿತ್ರವಾದುದು ಯಾವುದೂ ಇಲ್ಲ. ಜ್ಞಾನವನ್ನು ಪಡೆಯಬೇಕಾದರೆ ನಾವು ಶ್ರದ್ಧಾವಂತರಾಗಿರಬೇಕು. ಶ್ರದ್ಧೆ ಇಲ್ಲದವನಿಗೆ ಜ್ಞಾನ ಲಭಿಸದು.

**ನಮ್ಮನ್ನು ನಾವೇ ಉದ್ಧರಿಸಿಕೊಳ್ಳಬೇಕು :** ನಾವು ಯಾವ ಕಾರಣಕ್ಕೂ ನಮ್ಮನ್ನು ಕೀಳು ಎಂದು ಪರಿಗಣಿಸಿಕೊಳ್ಳಬಾರದು. **ಉದ್ಧರೇದ್ ಆತ್ಮನಾ ಆತ್ಮಾನಂ**– ನಮ್ಮನ್ನು ಉದ್ಧಾರ ಮಾಡಿಕೊಳ್ಳಬೇಕಾದವರು ನಾವೇ. ಏಕೆಂದರೆ, ನಮಗೆ ನಾವೇ ಶತ್ರು, ನಮಗೆ ನಾವೇ ಬಂಧುಗಳೂ ಕೂಡ. ಯಾರು ಮನಸ್ಸನ್ನು ನಿಗ್ರಹಿಸುವನೋ ಅವನಿಗೆ ಅದು ಬಂಧುವಾಗಿರುವುದು. ಯಾರು ಮನಸ್ಸನ್ನು ಗೆದ್ದಿಲ್ಲವೋ ಅವನಿಗೆ ಅದು ಶತ್ರುವೆಂಬಂತೆ ವರ್ತಿಸುವುದು.

**ಮನಸ್ಸಿನ ಏಕಾಗ್ರತೆ ಮತ್ತು ಧ್ಯಾನ:** ನಂತರ ಶ್ರೀಕೃಷ್ಣನು ಧ್ಯಾನದ ಬಗೆಯನ್ನು ನಮಗೆ ತಿಳಿಸಿಕೊಡುವನು. ಒಂದು ಆಸನದ ಮೇಲೆ ಕುಳಿತುಕೊಂಡು ಮನಸ್ಸನ್ನು ಏಕಾಗ್ರಗೊಳಿಸಿ, ಧ್ಯಾನವನ್ನು ಅಭ್ಯಾಸ ಮಾಡಬೇಕು. ತಲೆ, ಕೊರಳು, ದೇಹಗಳನ್ನು ನೇರವಾಗಿಟ್ಟುಕೊಂಡು, ಸ್ಥಿರವಾಗಿ ಕುಳಿತು, ಭಗವಂತನಲ್ಲೇ ಮನಸ್ಸನ್ನಿಡಬೇಕು. ಗಾಳಿಯಿಲ್ಲದ ಜಾಗದಲ್ಲಿ, ದೀಪವು ಅಲುಗಾಡದೆ ಹೇಗೆ

ಇರುವುದೋ ಹಾಗೇ, ಹೊರಗಿನ ವಸ್ತುಗಳ ಪ್ರಭಾವದಿಂದ ಮನಸ್ಸು ಚಂಚಲವಾಗಬಾರದು. ಇದೇ ಧ್ಯಾನದ ವಿಧಾನ.

**ಅಭ್ಯಾಸ ಮತ್ತು ವೈರಾಗ್ಯ:** ನಮ್ಮ ಆಹಾರ-ವಿಹಾರ-ನಿದ್ರೆಗಳು ಎಷ್ಟು ಬೇಕೋ ಅಷ್ಟಿರಬೇಕು. ಜಾಸ್ತಿಯಾದರೂ ತಪ್ಪು. ಕಡಿಮೆಯಾದರೂ ತಪ್ಪು. ಮನಸ್ಸನ್ನು ಒಮ್ಮೆಲೆ ಏಕಾಗ್ರಗೊಳಿಸಲು ಪ್ರಯತ್ನಿಸುವುದು ತಪ್ಪು. ಅದಕ್ಕೆ ಅಭ್ಯಾಸ ಬೇಕು. ಮೆಲ್ಲ ಮೆಲ್ಲನೆ ಮನಸ್ಸನ್ನು ನಿಯಂತ್ರಣದಲ್ಲಿ ತೆಗೆದುಕೊಂಡು, ಏಕಾಗ್ರಚಿತ್ತ ನಾಗಿರಲು ಪ್ರಯತ್ನಿಸಬೇಕು. ಆಗ ಅರ್ಜುನನು ಹೇಳಿಕೊಳ್ಳುತ್ತಾನೆ: " ಕೃಷ್ಣ, ಮನಸ್ಸು ಬಹಳ ಚಂಚಲವಾಗಿದೆ, ಅದು ಗಾಳಿಯನ್ನು ಹಿಡಿಯುವಷ್ಟು ಕಷ್ಟದ ಕೆಲಸ" ಎಂದು. ಅದನ್ನು ಶ್ರೀಕೃಷ್ಣ ಒಪ್ಪಿದನಾದರೂ, ಮನಸ್ಸನ್ನು ನಿಯಂತ್ರಿಸಲು **ಅಭ್ಯಾಸ ಮತ್ತು ವೈರಾಗ್ಯ** – ಈ ಎರಡು ಮಾರ್ಗಗಳನ್ನು ತಿಳಿಸಿಕೊಡುತ್ತಾನೆ. ಸತತ ಅಭ್ಯಾಸ ಮತ್ತು ನಮ್ಮೆದುರಿಗೆ ಇರುವ ಗುರಿಯನ್ನು ಬಿಟ್ಟು ಬೇರೆಲ್ಲವನ್ನೂ ಬಿಟ್ಟುಬಿಡುವುದು (ವೈರಾಗ್ಯ) – ಇವಿಲ್ಲ ದಿದ್ದರೆ ಯಾವುದೇ ಕೆಲಸವನ್ನು ಮಾಡಲು ಸಾಧ್ಯವಿಲ್ಲ.

**ಎಲ್ಲವನ್ನೂ ಭಗವಂತನಿಗೆ ಅರ್ಪಿಸುವುದು:** ಶ್ರೀಕೃಷ್ಣ ಹೇಳುತ್ತಾನೆ: "ಅರ್ಜುನ, ನೀನು ಯಾವ ಕೆಲಸವನ್ನು ಮಾಡುತ್ತೀಯೋ, ಏನನ್ನು ಊಟಮಾಡುತ್ತೀಯೋ, ಏನನ್ನು ದಾನ ಮಾಡು ತ್ತೀಯೋ, ಯಾವ ತಪಸ್ಸನ್ನು ಮಾಡುತ್ತೀಯೋ ಎಲ್ಲವನ್ನೂ ನನಗೆ ಅರ್ಪಿಸಿಬಿಡು. ನನ್ನಲ್ಲಿ ಮನಸ್ಸಿಡು, ನನ್ನ ಭಕ್ತನಾಗು, ನನ್ನನ್ನು ಪೂಜಿಸು. ನನ್ನನ್ನೇ ನಮಸ್ಕರಿಸು. ನನ್ನಲ್ಲಿ ಮನಸ್ಸಿಟ್ಟರೆ ನೀನು ನನ್ನನ್ನೇ ಸೇರುವೆ."

**ಯಾರು ನಿಜವಾದ ಭಕ್ತ?:** ಭಕ್ತನಾದವನು ಮೊದಲು ನೀತಿವಂತನಾಗಬೇಕು. ತನ್ನ ಸುತ್ತಲಿನವರೊಂದಿಗೆ ಸೌಹಾರ್ದ ದಿಂದ ಬಾಳಬೇಕು. ಕರುಣಿಯೂ ನಿರಹಂಕಾರಿಯೂ ಆಗಿರ ಬೇಕು, ಸುಖದುಃಖಗಳಲ್ಲಿ ಸಮನಾಗಿ ಇದ್ದುಕೊಂಡು, ಮನಸ್ಸನ್ನು ನಿಯಂತ್ರಿಸಿ, ಭಗವಂತನಲ್ಲಿಯೇ ತನ್ನೆಲ್ಲ ಮನಸ್ಸು, ಬುದ್ಧಿಗಳನ್ನು ಸಮರ್ಪಿಸಬೇಕು. ಅವನು ಉದ್ವೇಗರಹಿತನಾಗಿರಬೇಕು. ಬೇರೆ ಯವರಿಗೆ ತೊಂದರೆ ಕೊಡಬಾರದು ಮಾತ್ರವಲ್ಲ, ಬೇರೆಯವರು ತೊಂದರೆ ಕೊಟ್ಟರೆ ಉದ್ವೇಗ ಹೊಂದಬಾರದು. ಅಸಹನೆ, ಅಸೂಯೆ ಅವನಿಗೆ ಇರಬಾರದು. ಅವನು ಶುಚಿಯಾಗಿರಬೇಕು, ದಕ್ಷನೂ, ಯಾವ ಅಪೇಕ್ಷೆ ಇಲ್ಲದವನೂ ಆಗಿರಬೇಕು. ಅವನು ತನ್ನ ಶತ್ರುಗಳಲ್ಲಿಯೂ ಮಿತ್ರರಲ್ಲಿಯೂ ಶೀತೋಷ್ಣಗಳಲ್ಲಿಯೂ, ಹೊಗಳಿಕೆ-ನಿಂದೆಗಳಲ್ಲಿಯೂ ಸಮಾನ ಭಾವವನ್ನು ತೋರಬೇಕು. ಬಂದುದರಲ್ಲಿ ತೃಪ್ತನಾಗಿದ್ದು, ಸ್ಥಿರಬುದ್ಧಿಯವನಾಗಿರಬೇಕು. ಅಂತಹ ಭಕ್ತನು ನನಗೆ ಪ್ರಿಯನಾದವನು ಎಂದು ಶ್ರೀಕೃಷ್ಣ ಹೇಳುತ್ತಾನೆ.

**ಯಾರು ನಿಜವಾದ ಜ್ಞಾನಿ?:** ಭಗವಂತನೇ ನಮ್ಮ ದೇಹದಲ್ಲಿ ಅಂತರ್ಯಾಮಿಯಾಗಿದ್ದಾನೆ, ಈ ದೇಹ ಅವನ ಆಲಯ ಎಂದು ತಿಳಿದುಕೊಳ್ಳುವುದೇ ಜ್ಞಾನ. ಆ ಜ್ಞಾನವನ್ನು ಪಡೆದು ಕೊಳ್ಳಲು ನಾವು ಕೆಳಗಿನ ಗುಣಗಳನ್ನು ಬೆಳೆಸಿಕೊಳ್ಳಬೇಕು: ವಿನಯ, ಜಂಭವಿಲ್ಲದೆ ಇರುವದು, ಅಹಿಂಸೆ, ಸಹನೆ, ಗುರುಗಳನ್ನು ಸೇವಿಸುವುದು, ಸರಳ ಸ್ವಭಾವ, ಶೌಚ, ಸ್ಥೈರ್ಯ, ಆತ್ಮನಿಗ್ರಹ, ತನ್ಮಯತೆ, ಸಮಮನಸ್ಕತೆ, ಭಗವಂತನಲ್ಲಿ ಏಕನಿಷ್ಠೆ ಮುಂತಾದವು. ಜ್ಞಾನಿಯು ಮನಸ್ಸಿನಲ್ಲಿ ಸ್ಥಿರತೆಯನ್ನೂ, ಸಮಭಾವವನ್ನು ಪಡೆದು ಕೊಂಡಿರುತ್ತಾನೆ. ಯಾರು ಭಗವಂತನನ್ನು ಅನನ್ಯ ಪ್ರೀತಿಯಿಂದ ಸೇವಿಸುತ್ತಾರೋ ಅಂತಹವರು ಈ ಸ್ಥಿತಿಯನ್ನು ಪಡೆಯುತ್ತಾರೆ.

**ಶ್ರದ್ಧೆಯ ಮಹತ್ವ:** ಶ್ರದ್ಧೆ ಎಂದರೆ ಧನಾತ್ಮಕ ಚಿಂತನೆ. ಒಳ್ಳೆಯದನ್ನು ಚೆನ್ನಾಗಿ ವಿಚಾರಿಸಿ ಮನಃಪೂರ್ವಕವಾಗಿ ಒಪ್ಪಿ ಕೊಂಡು ಅದರಂತೆ ನಡೆಯುವ ಮನೋಭಾವ. ಶ್ರದ್ಧಾವಂತನ ಮನಸ್ಸು ಜ್ಞಾನವನ್ನು ಪಡೆಯಲು ಪಕ್ವವಾಗಿರುತ್ತದೆ. ಯಾರಿಗೆ ಯಾವ ರೀತಿ ಶ್ರದ್ಧೆ ಇದೆಯೋ ಅದೇ ರೀತಿ ಅವನ ವ್ಯಕ್ತಿತ್ವ ಒಡಮೂಡಿರುತ್ತದೆ.

**ಕರ್ತವ್ಯವನ್ನು ಬಿಡಬಾರದು :** ನಾವು ಮಾಡಬೇಕಾದ ಕರ್ತವ್ಯವನ್ನು ನಮ್ಮ ಶರೀರಕ್ಕೆ ಕಷ್ಟವಾಗುತ್ತದೆ ಎಂದು ಬಿಟ್ಟು ಬಿಡಬಾರದು. ಯಾರಿಗೂ ಕೆಲಸ ಮಾಡದೆ ಸುಮ್ಮನಿರಲು ಆಗುವುದಿಲ್ಲ. ಆದ್ದರಿಂದ ಜ್ಞಾನಿಯಾಗಿ, ಭಕ್ತನಾಗಿ, ಏಕಾಗ್ರತೆ ಯನ್ನು ಸಂಪಾದಿಸಿಕೊಂಡು ಭಗವಂತನ ಸೇವೆಯೆಂದು ಕೆಲಸ ಗಳನ್ನು ಮಾಡುತ್ತ ಹೋಗಬೇಕು. ಕೆಲಸದಲ್ಲಿ ಮೇಲು-ಕೀಳು ಎಂಬುದು ಇಲ್ಲ. ನಮಗೆ ಪ್ರಾಪ್ತವಾದ ಕೆಲಸವನ್ನು ಅಹಂಕಾರ ವಿಲ್ಲದೆ ಮಾಡುವುದರಲ್ಲಿಯೆ ನಮಗೆ ಶ್ರೇಯಸ್ಸಿದೆ.

**ಗೀತಾ ಮಾತೆ :** ಶ್ರೀಕೃಷ್ಣ ಭಗವಂತನಾದರೆ, ಅರ್ಜುನ ಎಲ್ಲ ಮನುಷ್ಯರನ್ನೂ ಪ್ರತಿನಿಧಿಸುತ್ತಾನೆ. ಭಗವಂತನ ಆಶ್ರಯ ಪಡೆದು ಮನುಷ್ಯನು ಏನೇ ಮಾಡಿದರೂ ಅದರಲ್ಲಿ ಜಯ ನಿಶ್ಚಿತ. ಇದೇ ಗೀತೆಯ ಸಂದೇಶ ಸಾರ.

**ಭಗವದ್ಗೀತೆ ನಮ್ಮ ಜೀವನ ಮಾರ್ಗದ ದಾರಿದೀಪದಂತೆ ಇದೆ; ನಮ್ಮೆಲ್ಲ ಕಾರ್ಯಗಳಲ್ಲೂ, ಭರವಸೆ ಮತ್ತು ಉತ್ಸಾಹಗಳನ್ನು ತುಂಬುವ, ಕಷ್ಟದಲ್ಲಿ ಸಾಂತ್ವನ ಕೊಡುವ ಸ್ನೇಹಿತನಂತೆ ಇದೆ, ಸರಿಯಾದ ಮಾರ್ಗದರ್ಶನ ಮಾಡುವ ಗುರುವಿನಂತೆಯೂ ಇದೆ. ಎಲ್ಲಕ್ಕೂ ಮಿಗಿಲಾಗಿ ತುಂಬು ಕರುಣೆಯಿಂದ ನಮ್ಮ ಬಾಳಿನಲ್ಲಿ ರಕ್ಷಣೆ ನೀಡುವ ತಾಯಿಯಂತೆ ಇದೆ. ಇಂತಹ ಗೀತಾಮಾತೆಯ ಅನುಗ್ರಹ ನಮ್ಮೆಲ್ಲರ ಮೇಲೆ ಇರಲಿ.**

(ಬರಹ: ಸಂ.)

**'ಶಿಕ್ಷಣಪ್ರಭ' ಮತ್ತು 'ವಿದ್ಯಾರ್ಥಿಪ್ರಭ' ವಿಭಾಗಗಳಲ್ಲಿ ಪರೀಕ್ಷೆ ಯನ್ನು ಎದುರಿಸುವುದು ಹೇಗೆ ಎನ್ನುವ ವಿಷಯದ ಬಗ್ಗೆ ಫೆಬ್ರವರಿ ೨೦೦೯ ರ ಸಂಚಿಕೆಯಿಂದ ಉಪಯುಕ್ತ ಲೇಖನಗಳನ್ನು ಪ್ರಕಟಿಸ ಲಾಗುವುದು. ಶ್ರೇಷ್ಠ ಶಿಕ್ಷಣ ತಜ್ಞರು ಮತ್ತು ಮನಃಶಾಸ್ತ್ರಜ್ಞರು ಈ ಲೇಖನಗಳನ್ನು ಬರೆದಿದ್ದಾರೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಇವುಗಳ ಉಪಯೋಗವನ್ನು ಪಡೆಯಬೇಕಾಗಿ ವಿನಂತಿ.**